# ಉಳಿಯಲಿ ಸಂಬಂಧ; ಹಸಿರಾಗಲಿ ಬಾಂಧವ್ಯ



■ ಡಾ. ವಿನಯ ಶ್ರೀನಿವಾಸ್

ನಿವೃತ್ತಿಯ ನಂತರ ದೊಡ್ಡಪ್ಪ ತಮ್ಮ ಕುಟುಂಬವನ್ನು ದೂರದ ಪೂನಾದಿಂದ ಶಿವಮೊಗ್ಗಕ್ಕೆ ಸ್ಥಳಾಂತರಿಸಿದ್ದರು. ಭಾರತದ ಸೇನೆಯಲ್ಲಿ ಅತಿ ಉನ್ನತ ಹುದ್ದೆಯಲ್ಲಿದ್ದು ನಿವೃತ್ತರಾದ ದೊಡ್ಡಪ್ಪನವರ ಸ್ನೇಹಿತರ ಬಳಗ ಬಲು ದೊಡ್ಡದು. ಸದಾ ಎಲ್ಲರೊಂದಿಗೆ ಹಸನ್ಮುಖದಿಂದ ಮಾತನಾಡುವ ಅವರು ಸ್ನೇಹಮಯಿ. ಇತ್ತೀಚೆಗೆ ದೂರದ ಪೂನಾದ ಅವರ ಸ್ನೇಹಿತರೊಬ್ಬರು ಯಾವುದೋ ಕಾರ್ಯನಿಮಿತ್ತ ಸಕುಟುಂಬ ಸಮೇತರಾಗಿ ಮೈಸೂರಿಗೆ ಬಂದಿದ್ದರು. ಅಲ್ಲಿನ ತಮ್ಮ ಕೆಲಸ ಮುಗಿದ ನಂತರ ನನ್ನ ದೊಡ್ಡಪ್ಪನವರನ್ನು ಭೇಟಿ ಮಾಡಲೇಬೇಕೆಂದು ಶಿವಮೊಗ್ಗಕ್ಕೆ ಬಂದದ್ದು ನನಗೆ ನಿಜಕ್ಕೂ ಸೋಜಿಗವೆನಿಸಿತ್ತು. ಪರಸ್ಪರ ಒಡನಾಟವಿಲ್ಲದೆ ಸಡಿಲಾಗುತ್ತಿದ್ದ ಸ್ನೇಹ ಹಾಗೂ ಸಂಬಂಧದ ಕೊಂಡಿಯನ್ನು ಮತ್ತೆ ಗಟ್ಟಿಯಾಗಿ ಬೆಸೆಯಲು ಆ ಕುಟುಂಬ ಮೈಸೂರಿನಿಂದ ಶಿವಮೊಗ್ಗಕ್ಕೆ ಪ್ರಯಾಣ ಬೆಳೆಸಿತ್ತು. ಬಸ್ಸಿನ ಪ್ರಯಾಣದ ಸುಖ–ದುಖಃಗಳನ್ನು ಬಲ್ಲವರೇ ಬಲ್ಲರು! ಅಂತಹದ್ದರಲ್ಲಿ ಸುಮಾರು ಅರವತ್ತೈದು ವರ್ಷದ ಅವರು ಆ ಕಷ್ಟನಷ್ಟಗಳನ್ನೆಲ್ಲ ಲೆಕ್ಕಿಸದೇ ತಮ್ಮ ಹಳೆಯ ಸ್ನೇಹಿತನನ್ನು ಭೇಟಿ ಮಾಡಲು ಸುಮಾರು ಐದಾರು ತಾಸು ಕುಟುಂಬ ಸಮೇತ ಬಸ್ಸಿನಲ್ಲಿ ಪ್ರಯಾಣ ಮಾಡಿಕೊಂಡು ಬಂದದ್ದು ನನ್ನೊಳಗೆ ಒಂದಿಷ್ಟು ವಿಚಾರಗಳು ಸುಳಿದಾಡುವಂತೆ ಮಾಡಿದ್ದವು.

ಈಗಿನ ಈ ದಿನಗಳಲ್ಲಿ ಇಂತಹ ಗಟ್ಟಿ ಸಂಬಂಧಗಳು ವಿರಳ ಎಂದೇ ಹೇಳಬಹುದು. ಈ ಕಾಲದಲ್ಲಿ ಬಂಧು ಮಿತ್ರರು ಸ್ವತಃ ಮನೆಗೆ ಬಂದು ತಮ್ಮ ಮನೆಯ ಶುಭಕಾರ್ಯಗಳಿಗೆ ಆಹ್ವಾನಿಸಿದಾಗಲೂ ಯಾವುದೋ ನೆಪವೊಡ್ಡಿ ಕಾರ್ಯಗಳಿಗೆ ಗೈರಾಗುವವರನ್ನು ನೋಡಿದ್ದೆ. ಅಂತೆಯೇ ಮಾರುಕಟ್ಟೆಯಲ್ಲಿ ಅಡ್ಡಾಡುವಾಗ ಪರಿಚಿತರನ್ನು ಕಂಡರೂ ಕಾಣದವರಂತೆ ಹೋಗುವವರನ್ನೂ ಗಮನಿಸಿದ್ದೆ. ಬಂಧು ಮಿತ್ರರು ಫೋನ್ ಮಾಡಿದಾಗ ಬಿಡುವಿಲ್ಲದ ದಿನಚರಿಯಲ್ಲಿ ಕರೆಯನ್ನು ಸ್ವೀಕರಿಸಲೂ ಹಿಂದು ಮುಂದು ನೋಡುವವರನ್ನು ನಮ್ಮ ಹತ್ತಿರದಲ್ಲೇ ಕಂಡು ಅಚ್ಚರಿಪಟ್ಟಿದ್ದೆ. ಯಾವುದೋ ಕ್ಷುಲ್ಲಕ ಕಾರಣಗಳಿಗಾಗಿ ಹತ್ತಿರದ ಬಂಧುಗಳೊಡನೆಯೇ ಮನಸ್ತಾಪ ಮಾಡಿಕೊಂಡು ಪರಸ್ಪರ ಮಾತನಾಡದಂತೆಯೇ ಬಹುಪಾಲು ಜೀವನವನ್ನು ಸಾಗಿಸಿದವರನ್ನೂ ಅನೇಕ ಕುಟುಂಬಗಳಲ್ಲೇ ಕಂಡಿದ್ದೆ. ತಮ್ಮ ಕೆಲಸಗಳು ಆಗಬೇಕಾದಾಗ ಮಾತ್ರ ಮೇಲೆ ಬಿದ್ದು ಮಾತನಾಡಿಸಿ, ಕಾರ್ಯಮುಗಿದ ಮೇಲೆ ಪರಿಚಯವೇ ಇರದವರಂತೆ ವರ್ತಿಸು ವವರನ್ನು ಎಷ್ಟೋ ಬಾರಿ ಗಮನಿಸಿದ್ದೆ. ಇಂತಹವರ ನ್ನೆಲ್ಲ ನೋಡಿದ್ದ ನನಗೆ ಈ ದೊಡ್ಡಪ್ಪನ ಸ್ನೇಹಿತ ಹಾಗೂ ಅವರ ಕುಟುಂಬದವರ ಸ್ನೇಹ ಹಾಗೂ ಪ್ರೀತಿಯ ನಡವಳಿಕೆ ಬಹಳ ಅಪರೂಪದ್ದು ಎನಿಸಿತ್ತು.

ನಿಜ, ಈ ದಿನಗಳಲ್ಲಿ ಯಾರಿಗೂ ಬಿಡುವೇ ಇಲ್ಲ. ಎಲ್ಲರೂ ಸಮಯವಿಲ್ಲ ಎಂಬ ಸಬೂಬಿನ ಸುತ್ತಲೂ ಗಿರಕಿ ಹೊಡೆಯುತ್ತಿದ್ದೇವೆ. ಆ ಕಾರಣವನ್ನೇ ಮುಂದಿಡುತ್ತಾ ಎಲ್ಲ ಸ್ನೇಹ ಸಂಬಂಧಗಳ ಕೊಂಡಿಯನ್ನು ಕಳಚಿಕೊಳ್ಳುತ್ತಿದ್ದೇವೆ. ಇದು ಸರಿಯೇ..? ಮನುಷ್ಯ ಸಮಾಜಜೀವಿ. ಬದುಕಿನ ಪ್ರತಿ ಹಂತಗಳಲ್ಲಿಯೂ ಆತ ಇತರರ ಮೇಲೆ ಅವಲಂಬಿತನಾಗಿರುತ್ತಾನೆ. ಅನೇಕ ಸಂದರ್ಭಗಳಲ್ಲಿ ಬಂಧು ಮಿತ್ರರ ಸಹಾಯವನ್ನೂ ಪಡೆದಿರುತ್ತಾನೆ. ಹೀಗೆ ಪ್ರಾರಂಭವಾದ ಸ್ನೇಹ ಹಾಗೂ ಸಂಬಂಧಗಳನ್ನು ಜೀವನದುದ್ದಕ್ಕೂ ಉಳಿಸಿಕೊಂಡು ಹೋಗುವುದು ಬಹಳ ಮುಖ್ಯ. ಆದರೆ ಆ ಕೆಲಸ ಅಷ್ಟೊಂದು ಸುಲಭಕ್ಕೆ ಆಗದು. ಅದಕ್ಕಾಗಿ ಆತ ಒಂದಿಷ್ಟು ಶ್ರಮ ಪಡಬೇಕು, ಮನಸ್ಸು ಮಾಡಬೇಕು ಮತ್ತು ತನ್ನ ಒಂದಿಷ್ಟು ಸಮಯವನ್ನೂ ಮೀಸಲಿಡಬೇಕು. ಹಾಗಾದಾಗ ಮಾತ್ರವೇ ಸಂಬಂಧಗಳು ಉಳಿದು ಗಟ್ಟಿಯಾಗುತ್ತವೆ; ಬದುಕನ್ನು ಹಸನುಗೊಳಿಸಿ ಒಂದಿಷ್ಟು ಸಂತೃಪ್ತಿಯನ್ನು ತರುತ್ತವೆ.

ಒಂದು ಕುಟುಂಬದ ಸದಸ್ಯರ ನಡುವಿರುವ ಪರಸ್ಪರ ಸಂಬಂಧವು ಬಲು ಸೂಕ್ಷ್ಮವಾದದ್ದು. ಪತಿ ಪತ್ನಿ, ಅತ್ತೆ /ಮಾವ ಸೊಸೆ, ಅಮ್ಮ ಮಗ/ ಮಗಳು, ಅಪ್ಪ ಮಗ/ಮಗಳು, ಅತ್ತಿಗೆ ನಾದಿನಿ ಹೀಗೆ ಒಂದು ಕುಟುಂಬದ ಸದಸ್ಯರ ನಡುವೆ ಸದಾ ಒಳ್ಳೆಯ ಬಾಂಧವ್ಯವಿರಬೇಕು. ಅದರೆ ಹೇಗೆ ಒಂದೇ ಕೈಯಲ್ಲಿರುವ ಐದು ಬೆರಳುಗಳು ಒಂದೇ ಸಮನಾಗಿಲ್ಲವೋ ಹಾಗೆಯೇ ಒಂದೇ ಕುಟುಂಬದವರಾಗಿದ್ದರೂ ಅಲ್ಲಿನ ಎರಡು ವ್ಯಕ್ತಿಗಳ ಅಭಿಪ್ರಾಯಗಳು ಹಾಗೂ ಮನಸ್ಥಿತಿ ಒಂದೇ